## ಮಹೇಂದ್ರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್

## ಬೊಮ್ಮಸಂದ್ರ, ಬೆಂಗಳೂರು – 560 099

ಸಂಖ್ಯೆ:- MSCCL/2025-26/45 ದಿನಾಂಕ: 02-01-2026

### ಅಧಿಸೂಚನೆ

ಮಹೇಂದ್ರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ನಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಂಬಂಧ ಸಹಕಾರಿಯಿಂದ ಅರ್ಜಿಯನ್ನು ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ಸದರಿ ಹುದ್ದೆಗಳ ನೇಮಕಾತಿಗೆ ಅರ್ಹತೆ ಪಡೆಯಲು ಸಹಕಾರಿಯು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗಬೇಕು.

**ಖಾಲಿ ಇರುವ ಹುದ್ದೆಗಳ ವಿವರ:**

| ಕ್ರ. ಸಂ | ಪದನಾಮ | ಹುದ್ದೆಯ ಸಂಖ್ಯೆ | ವೇತನ ಶ್ರೇಣಿ | ವಿದ್ಯಾರ್ಹತೆ |
|---|---|---|---|---|
| 1 | ಮುಖ್ಯ ಕಾರ್ಯನಿರ್ವಾಹಕ | 1 | 37900-950-39800-1100-46400-1250-53900-1450-62600-1650-70850 | ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವ ವಿದ್ಯಾಲಯದ ಬಿಕಾಂ/ಬಿ.ಬಿ.ಎಂ/ಬಿ.ಬಿ.ಎ, ಪದವಿಯಲ್ಲಿ ತೇರ್ಗಡೆಯಾಗಿರಬೇಕು. |
| 2 | ಸಹಾಯಕ ವ್ಯವಸ್ಥಾಪಕರು/ ಲೆಕ್ಕಾಧಿಕಾರಿಗಳು | 1 | 30350-750-32600-850-36000-950-39800-1100-46400-1250-53900-1450-58250 | ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವ ವಿದ್ಯಾಲಯದ ಬಿ.ಕಾಂ/ಬಿ.ಬಿ.ಎ, ಪದವಿಯಲ್ಲಿ ತೇರ್ಗಡೆಯಾಗಿರಬೇಕು. |
| 3 | ಹಿರಿಯ ಸಹಾಯಕರು | 1 | 23500-550-24600-600-27000-650-29600-750-32600-850-36000-950-39800-1100-46400-1250-47650 | ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವ ವಿದ್ಯಾಲಯದ ಪದವಿಯಲ್ಲಿ ತೇರ್ಗಡೆಯಾಗಿರಬೇಕು. |

**ವಿಶೇಶ ಸೂಚನೆ:**

1) ಸಹಕಾರ ವಿಷಯದಲ್ಲಿ ಡಿಪ್ಲೊಮಾ ಕೋರ್ಸ್ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
2) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.
3) ಕಂಪ್ಯೂಟರ್ ಜ್ಞಾನವನ್ನು ಹೊಂದಿರಬೇಕು.

**<u>ವಯೋಮಿತಿ :-</u>**

ಸಹಕಾರಿಯ ಉಪನಿಯಮದ ಸಂಖ್ಯೆ 66ರ ಅನ್ವಯ ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ದಿನಾಂಕದಂದು ಎಲ್ಲಾ ಅಭ್ಯರ್ಥಿಗಳಿಗೂ ಕನಿಷ್ಠ 18 ವರ್ಷ ವಯಸ್ಸು ತುಂಬಿರತಕ್ಕದ್ದು.ಹಾಗೂ ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

| **ಅಭ್ಯರ್ಥಿಗಳು** | **ಗರಿಷ್ಠ ವಯೋಮಿತಿ** |
|---|---|
| ಸಾಮಾನ್ಯ ವರ್ಗದವರಿಗೆ | 35 ವರ್ಷಗಳು |
| ಹಿಂದುಳಿದ ವರ್ಗದವರಿಗೆ | 38 ವರ್ಷಗಳು |
| ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರಿಗೆ | 40 ವರ್ಷಗಳು |

**<u>ಅರ್ಜಿ ಸಲ್ಲಿಸುವ ವಿಧಾನ:-</u>**

ನೇಮಕಾತಿ ಪ್ರಕ್ರಿಯೆ ಹಾಗೂ ವಿವರಗಳನ್ನು ಸಹಕಾರಿಯ ವೆಬ್ ಸೈಟ್ www.mahendracreditcooperative.com ನಲ್ಲಿ ಹುದ್ದೆಗಳಿಗೆ ಅರ್ಜಿಯನ್ನು pdf format ನಲ್ಲಿ ನೀಡಿರಲಾಗಿರುತ್ತದೆ. ಇದನ್ನು download ಮಾಡಿಕೊಂಡು ಭರ್ತಿ ಮಾಡಿ ದಿನಾಂಕ 17-01-2026ರ ಸಂಜೆ 5.30ರ ಒಳಗಾಗಿ ಇ ಮೇಲ್ ಮೂಲಕ( bm@mahendracreditcooperative.com )/ ಖುದ್ದಾಗಿ/ ಅಂಚೆ ಮೂಲಕ ಸಹಕಾರಿಯ ವಿಳಾಸಕ್ಕೆ ತಲುಪಿಸಬೇಕು.

**ಶುಲ್ಕ:-**

ಅರ್ಜಿ ಶುಲ್ಕವನ್ನು "MAHENDRA SOUHARDA CREDIT COOPERATIVE LIMTED" ಹೆಸರಿನಲ್ಲಿ ಪೇ ಆರ್ಡರ್ / ಡಿಡಿ ಮೂಲಕ ಪಾವತಿಸಬೇಕಾಗಿರುತ್ತದೆ.

| **ಹುದ್ದೆ** | **ಅರ್ಜಿ ಶುಲ್ಕ** |
|---|---|
| ಮುಖ್ಯ ಕಾರ್ಯನಿರ್ವಾಹಕ | 500 |
| ಸಹಾಯಕ ವ್ಯವಸ್ಥಾಪಕರು/ ಲೆಕ್ಕಾಧಿಕಾರಿಗಳು | 300 |
| ಹಿರಿಯ ಸಹಾಯಕರು | 200 |

**ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:-**

1) 10 ನೇ ತರಗತಿ ಹಾಗೂ ಪದವಿ ತರಗತಿಯ ಅಂಕಪಟ್ಟಿ ಪ್ರತಿಗಳು
2) ಸಹಕಾರಿ ಡಿಪ್ಲಮೋ ಸರ್ಟಿಫಿಕೇಟ್ ಇದ್ದಲ್ಲಿ ಅದರ ಪ್ರತಿ
3) ವೃತ್ತಿ ಅನುಭವದ ಪ್ರಮಾಣ ಪತ್ರ
4) ಹಿಂದುಳಿದ ವರ್ಗ, ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದ ಪ್ರಮಾಣ ಪತ್ರ
5) ಪೇ ಆರ್ಡರ್/ಡಿ.ಡಿ

ನೇಮಕಾತಿ ಅರ್ಜಿಯಲ್ಲಿ ತಿಳಿಸಿರುವ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡತಕ್ಕದ್ದು. ಅಪೂರ್ಣ ಅರ್ಜಿಗಳನ್ನು ಅಸಿಂಧು ಗೊಳಿಸಲಾಗುವುದು. ಸಹಕಾರಿಯ ತೀರ್ಮಾನವೇ ಅಂತಿಮ. ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕಛೇರಿಯ notice board ನಲ್ಲಿ ಹಾಗೂ ಸಹಕಾರಿಯ website ನಲ್ಲಿ ಹಾಗೂ ಅರ್ಜಿದಾರರಿಗೆ whatsapp, message, ಮೂಲಕ ತಿಳಿಸಲಾಗುವುದು.

**<u>ನೇಮಕಾತಿ ವಿಧಾನ:-</u>**

ಮೇಲ್ಕಂಡ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಹಾಗೂ ನೇರ ಸಂದರ್ಶನವನ್ನು ನಡೆಸಲಾಗುವುದು.

ಲಿಖಿತ ಪರೀಕ್ಷೆಯ ವಿಷಯ :-
ಕನ್ನಡ ಜ್ಞಾನ 25 ಅಂಕಗಳು
ಸಹಕಾರಿ ಜ್ಞಾನ 25 ಅಂಕಗಳು
ಬ್ಯಾಂಕಿಂಗ್ ಜ್ಞಾನ 25 ಅಂಕಗಳು
ಸಾಮಾನ್ಯ ಜ್ಞಾನ 25 ಅಂಕಗಳು

ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯ ದಿನಾಂಕವನ್ನು ತಿಳಿಸಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

ಮಹೇಂದ್ರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್
ಲಿಮಿಟೆಡ್ ರ ಪರವಾಗಿ

ಸಹಿ/-
(ಬಿ ಟಿ ನಾಗರಾಜ ರೆಡ್ಡಿ)
ಅಧ್ಯಕ್ಷರು

ದಿನಾಂಕ:- 02-01-2026
ಸ್ಥಳ :- ಬೆಂಗಳೂರು.